ಮಲೈಮಹಾದೇಶ್ವರ ಬೆಟ್ಟದಲ್ಲಿ ಜನಪದ ಅಧ್ಯಯನ ಕೇಂದ್ರ ಸ್ಥಾಪನೆ

20(330) ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಮಲೈಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಲು 2007–08ನೇ ಸಾಲಿನಲ್ಲಿಯೇ ತೀರ್ಮಾನಿಸಿ, ಆಯವ್ಯಯದಲ್ಲಿ ರೂ. 5.00 ಕೋಟಿ ಅನುದಾನವನ್ನು ಘೋಷಣೆ ಮಾಡಿ. ಅಗತ್ಯವಾದ ಭೂಮಿ ಹಾಗೂ ತಾತ್ಕಾಲಿಕ ಕಟ್ಟಡ ಒದಗಿಸಿ, ಕೆರೆಮನೆ ಶಂಭು ಹೆಗಡೆ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಲಹಾ ಸಮಿತಿ ರಚಿಸಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಮಿತಿಯ ಶಿಫಾರಸ್ಸಿನಂತೆ ಅಧ್ಯಯನ ಕೇಂದ್ರದ ಆಡಳಿತ ನಿರ್ವಹಣೆಗೆ ಅಂಗರಚನೆ (ಬೈಲಾಸ್)ಗೆ ಅನುಮೋದನೆ ನೀಡಿದ್ದರೂ ಸಹ ಈವರೆವಿಗೂ ಅಧ್ಯಯನ ಕೇಂದ್ರ ತನ್ನ ಚಟುವಟಿಕೆಗಳನ್ನು ಆರಂಭಿಸಲು ಸರ್ಕಾರವು ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ನೇಮಕ ಮಾಡದೇ ವಿಳಂಬ ನೀತಿ ಅನುಸರಿಸುತ್ತಿರುಲು ಕಾರಣ ಏನು;

ಇ) ಈ ಅಧ್ಯಯನ ಕೇಂದ್ರ ಚಟುವಟಿಕೆಗಳನ್ನು ತ್ವರಿತವಾಗಿ ಪ್ರಾರಂಭಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು;

ಈ) ಪ್ರಸಕ್ತ ಸಾಲಿನಲ್ಲಿ ಈ ಜಾನಪದ ಅಧ್ಯಯನ ಕೇಂದ್ರಕ್ಕೆ ಮೀಸಲಿಟ್ಟಿರುವ ಅನುದಾನ ಎಷ್ಟು; ವೆಚ್ಚ ಮಾಡಲು ಹಾಕಿಕೊಂಡಿರುವ ಯೋಜನೆಗಳಾವುವು; (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಹೌದು. ಸಮಿತಿಯನ್ನು ರಚಿಸಲಾಗಿದೆ. ಈ ಉದ್ದೇಶಕ್ಕೆ ರೂ. 50.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಶ್ರೀ ಕೆರೆಮನೆ ಶಂಭು ಹೆಗಡೆಯವರು ದೈವಾಧೀನರಾಗಿರುವುದರಿಂದ ಮತ್ತೊಬ್ಬ ಅಧ್ಯಕ್ಷರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಇಲ್ಲಿ ಪ್ರಾರಂಭಿಸಲಿರುವ ಜಾನಪದ ಪ್ರದರ್ಶನ ಕಲೆಗಳ ತರಬೇತಿ ಶಿಬಿರಗಳಿಗೆ ಅವಶ್ಯವಾದ ಕೊಠಡಿಗಳ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಈ) ಈ ಉದ್ದೇಶಕ್ಕಾಗಿ ಈಗಾಗಲೆ ರೂ. 50.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಅಧ್ಯಯನ ಪೀಠದ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:

ಅ) ಆಸಕ್ತಿಯುಳ್ಳ ಯುವಕ ಯುವತಿಯರಿಗೆ ಜಾನಪದ ಪ್ರದರ್ಶನ ಕಲೆಗಳ ತರಬೇತಿ ಶಿಬಿರವನ್ನು ಮೊದಲಿಗೆ ಈ ಕೆಳಕಂಡ ಕಲೆಗಳ ಬಗ್ಗೆ ನೀಡಲಾಗುವುದು.

1) ಕಂಸಾಳೆ
2) ಪೂಜಾಕುಣಿತ
3) ಕಣಿವಾದನ
4) ಅಲಾಯಿ ಹೆಜ್ಜೆ ಮೇಳ
5) ಹಾಲಕ್ಕಿ ಸುಗ್ಗಿ ಕುಣಿತ

ಆ) ಕಂಸಾಳೆ, ಪೂಜಾಕುಣಿತ ಮತ್ತು ಗೊರವರ ಕುಣಿತ ಈ ಕಲೆಗಳ ಬಗ್ಗೆ ತರಬೇತಿ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತದೆ.

ಇ) ಕಣಿವಾದನ, ಅಲಾಯಿ ಹೆಜ್ಜೆ ಮೇಳ, ಹಾಲಕ್ಕಿ ಸುಗ್ಗಿ ಕುಣಿತ ಈ ಕಲೆಗಳ ಬಗ್ಗೆ ತರಬೇತಿ ಧಾರವಾಡದಲ್ಲಿ ನಡೆಯುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಲೈಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ತೆರೆಯಬೇಕೆಂದು ಹಿಂದಿನ ಸಮ್ಮಿಶ್ರ ಸರ್ಕಾರದ ಅವಧಿಯ 2007-08ರ ಸಾಲಿನ ಬಜೆಟ್‌ನಲ್ಲಿ 5 ಕೋಟಿ ರೂ.ಗಳ ಘೋಷಣೆ ಮಾಡಿದ್ದರು. ಇದುವರೆಗೂ ಜಾನಪದ ಅಧ್ಯಯನ ಕೇಂದ್ರ ತೆರೆಯುವ ಕೆಲಸ ಪ್ರಾರಂಭವಾಗಿಲ್ಲ. ಹಿಂದೆ 3 ಎಕರೆ ಜಾಗವನ್ನು ಮಲೈಮಹದೇಶ್ವರ ಬೆಟ್ಟದ ಆಡಳಿತ ಮಂಡಳಿಯಿಂದ ಈ ಒಂದು ಕೇಂದ್ರಕ್ಕಾಗಿಯೇ ಬಿಡುಗಡೆ ಮಾಡಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ಕೊಟ್ಟಿದೆ. ಜೊತೆಗೆ ಜಾನಪದ ಅಧ್ಯಯನ ಕೇಂದ್ರದ ಆಡಳಿತ ಕಛೇರಿ ನಡೆಸುವುದಕ್ಕೆ ಧರ್ಮದರ್ಶಿ ಮಂಡಳಿಯಿಂದ 2 ಕೊಠಡಿಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಷ್ಟಾಗಿದ್ದರೂ ಇವತ್ತಿನ ವರೆಗೂ ಅಲ್ಲಿ ಆ ಕೇಂದ್ರವನ್ನು ಸ್ಥಾಪನೆ ಮಾಡುವ ಕೆಲಸ ಇಲಾಖಾವತಿಯಿಂದ ಆಗಿಲ್ಲ.

3-4 ವರ್ಷಗಳಿಂದ ಕೇವಲ ಕಡತಗಳ correspondence ನಡೆಯುತ್ತಿದೆಯೇ ಹೊರತು ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿಲ್ಲ. ಇದಕ್ಕೆ ಕಾರಣವೇನೆಂಬುದು ಇವತ್ತಿನವರೆಗೂ ನನಗೆ ಗೊತ್ತಾಗುತ್ತಿಲ್ಲ. ಹಿಂದೆ ಈ ಇಲಾಖೆಯನ್ನು ಮಾನ್ಯ ಮುಖ್ಯಮಂತ್ರಿಯವರು ನಿರ್ವಹಿಸುತ್ತಿದ್ದಾಗಲೂ ಕೂಡ ನಾಲ್ಕಾರು ಬಾರಿ ಅವರ ಗಮನ ಸೆಳೆದಿದ್ದೆವು. ಈಗ ತಾವು ಆ ಇಲಾಖಾ ಸಚಿವರಿದ್ದೀರಿ. ಮಲೈಮಹದೇಶ್ವರ ಬೆಟ್ಟ ಅಂದರೆ ಸಹಜವಾಗಿ ಜಾನಪದ ಕಲೆ ಅಲ್ಲಿ ತಾಂಡವವಾಡಬೇಕು, ಪ್ರತಿ ನಿತ್ಯ ಸಾವಿರಾರು, ಲಕ್ಷಾಂತರ ಭಕ್ತಾದಿಗಳು ಬರುತ್ತಿರುತ್ತಾರೆ. ಜೊತೆಜೊತೆಯಲ್ಲಿ ಆ ಪದಗಳನ್ನು ಹಾಡಿಕೊಂಡು ಬರುತ್ತಿರುತ್ತಾರೆ. ಆ ಪದಗಳನ್ನೆಲ್ಲಾ ಸಂಗ್ರಹಿಸಿ ಅಲ್ಲಿ ಜಾನಪದ ಕಲೆಯನ್ನು ಜೀವಂತವಾಗಿ ಉಳಿಸಲು ತರಬೇತಿ ಕೊಡಬೇಕು, ಪ್ರದರ್ಶನ ಮಾಡಬೇಕು. ತರಬೇತಿ ಹೊಂದಿರುವವರಿಂದ ಅಲ್ಲಿ ಬರುವ ಭಕ್ತಾದಿಗಳಿಗೆ ಸಂಜೆಯ ವೇಳೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕೆಂದು ಜಾನಪದ ಅಧ್ಯಯನ ಕೇಂದ್ರ ತೆರೆಯಬೇಕೆಂದು ನಾನು ಸಚಿವನಾಗಿದ್ದ ಸಮಯದಲ್ಲಿ ಪ್ರಾರಂಭಿಸಿದ್ದೆ. ಆದರೆ, ಇವತ್ತಿನವರೆಗೂ ಸ್ಥಾಪನೆಯಾಗಿಲ್ಲ. 5 ಕೋಟಿ ರೂ. ಬದಲು 2 ಕೋಟಿ ರೂ.ಗೆ restrict ಮಾಡಿದರು. ಆ 2 ಕೋಟಿ ರೂ.ಗಳಲ್ಲೂ ಕೂಡ ಜಿಲ್ಲಾಧಿಕಾರಿಗಳಿಗೆ 50 ಲಕ್ಷ ರೂ. ಮಾತ್ರ ಬಂದಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಇದುವರೆಗೂ ಯಾವುದೇ ಕಾರ್ಯಕ್ರಮ ಪ್ರಾರಂಭವಾಗಿಲ್ಲ. ಎರಡನೆಯದಾಗಿ, ಒಂದು ಸಲಹಾ ಸಮಿತಿಯನ್ನು ರಚಿಸಿ ತಜ್ಞರ ಸಮಿತಿ ರಚಿಸಿ ಅದಕ್ಕೊಬ್ಬರು co-coordinator ಅನ್ನು ನೇಮಕ ಮಾಡಿ ಆ ಕೇಂದ್ರ ಕಾರ್ಯನಿರ್ವಹಣೆ ಮಾಡುವ ರೀತಿಯಲ್ಲಿ ಮಾಡಬೇಕು. ನಾನು Secretary, Director, ಹಿಂದೆ ಇದ್ದ Secretary, ಈಗಿರುವ Secretary ಎಲ್ಲರಿಗೂ ಹೇಳಿ ಸುಮಾರು ಸಲ ಸುತ್ತಾಡಿ ಆಯಿತು. ಇದನ್ನು ಮಾಡಬೇಕೆನ್ನುವ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆಯೋ ಇಲ್ಲವೋ? ಅಥವಾ ಇದನ್ನು ಕೈಬಿಟ್ಟಿದ್ದೇವೆಂದು ಹೇಳಬೇಕು. ಚಾಮರಾಜನಗರ ಜಿಲ್ಲೆಯಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುತ್ತಾರೆಂದು ನಾವು ತಿಳಿದಿದ್ದೆವು. ಆದರೆ, ಅದು ಆಗಲಿಲ್ಲ. ಕೊನೆಗೆ ಮಂಜೂರಾಗಿರುವ ಜಾನಪದ ಅಧ್ಯಯನ ಕೇಂದ್ರವನ್ನಾದರೂ ನಮ್ಮ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವ ಕಾಳಜಿ ಸರ್ಕಾರಕ್ಕೆ ಇದೆಯೋ ಇಲ್ಲವೋ? ಕಾಳಜಿ ಇದ್ದರೆ

ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ನಿಖರವಾಗಿ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಮಹದೇವ ಪ್ರಸಾದ್‌ರವರು 2007-08ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಆ ಸಾಲಿನ ಅನುದಾನದಲ್ಲಿ 5 ಕೋಟಿ ರೂ.ಗಳನ್ನು ನಿಗದಿಪಡಿಸಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದರು. ಆದರೆ, ಅದು ಕಾರ್ಯಗತವಾಗದೆ ಹಾಗೆಯೇ ಉಳಿದು ಈಗ ಅದನ್ನು ಕಾರ್ಯಗತ ಮಾಡಬೇಕು, ಅಲ್ಲಿ ಜಾನಪದ ಅಧ್ಯಯನ ಕೇಂದ್ರ ಆಗಬೇಕೆಂದು ಸರ್ಕಾರ 50 ಲಕ್ಷ ರೂ.ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ. ಆ ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದೇವೆ. ಕೆರೆಮನೆ ಶಂಭುಹೆಗಡೆಯವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಆದರೆ, ಅವರು ತೀರಿಹೋಗಿದ್ದರಿಂದ ಸ್ವಲ್ಪ ಹಿನ್ನೆಡೆಯಾಗಿದೆ. ಕೂಡಲೆ, ಒಬ್ಬರನ್ನು ನೇಮಕಾತಿ ಮಾಡಿ ಆ ಕೆಲಸವನ್ನು ಮಾಡಲಿಕ್ಕೆ ಸರ್ಕಾರ ಬದ್ಧವಿದೆ ಎಂದು ಹೇಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಕೆರೆಮನೆ ಶಂಭು ಹೆಗಡೆಯವರನ್ನು ನೇತೃತ್ವದಲ್ಲಿ ಸಲಹೆ ಕೊಡುವುದಕ್ಕೆ ಒಂದು ಸಮಿತಿ ನೇಮಕ ಮಾಡಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಿರಿ. ಆ ಸಮಿತಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಾಗಿದೆ. ಅದರ ಆಧಾರದ ಮೇಲೆ ಆಡಳಿತ ಮಂಡಳಿಯನ್ನು ನೇಮಕ ಮಾಡುವುದಕ್ಕೆ ಒಂದು file ಸರ್ಕಾರದ ಮುಂದಿದೆ. ಅದನ್ನು ಆದಷ್ಟು ಬೇಗ clear ಮಾಡಬೇಕು ಮತ್ತು ಅಲ್ಲಿಗೆ ಯಾರಾದರೊಬ್ಬರನ್ನು ಅಂದರೆ, ಇಲಾಖೆಯವರನ್ನಾಗಲಿ ಅಥವಾ honorary ಆಗಿ ಹೊರಗಡೆಯಿಂದ ಜಾನಪದ ತಜ್ಞರನ್ನು ತೆಗೆದುಕೊಂಡು ಆ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ಅಲ್ಲಿಗೆ ನೇಮಕ ಮಾಡಬೇಕು.

ಈ ಎರಡು ಬಹಳ ಸುಲಭವಾದ ಕೆಲಸ, ಆಸಕ್ತಿ ಇರಬೇಕಾಗುತ್ತದೆ, ಸರ್ಕಾರ ಕೂಡಲೆ ಇದನ್ನು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಹೆಚ್ಚು ಆಸಕ್ತಿ ಇರುವುದರಿಂದಲೇ ಹೆಚ್ಚು ಅನುದಾನ ಕೊಟ್ಟು ಸಂಬಂಧಪಟ್ಟ ಕೆಲಸ